**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 384/2018**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ನಾಗರಾಜ ಮತ್ತು ಇತರರು

-ಃದೋಷಾರೋಪಣೆಃ-

ಶ್ರೀ ನಂಜೇಗೌಡ ಎಂ.ಸಿ., ಬಿ.ಎ.ಎಲ್., ಎಲ್.ಎಲ್.ಎಂ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ನಾಗರಾಜ ಇ ಆರ್ ಯಾನೆ ನಾಗ ಬಿನ್ ಲೇಟ್ ರವಿಶಂಕರ, 23 ವರ್ಷ, ಕೂಲಿ ಕೆಲಸ, ವಾಸಃ 4 ನೇ ಕ್ರಾಸ್, ತರೀಕೆರೆ ನಗರ.
2. ಸುರೇಶ ಬಿನ್ ರಂಗನಾಥ, 23 ವರ್ಷ, ಗಾರೆ ಕೆಲಸ, ವಾಸಃ ಇಂದಿರಾನಗರ, ತರೀಕೆರೆ.
3. ರವಿ ಬಿನ್ ಲೇಟ್ ಪೆದ್ದಪ್ಪ, 41 ವರ್ಷ, ಗಾರೆ ಕೆಲಸ, ವಾಸಃ ಕೌನ್ಸಿಲರ್ ಕೃಷ್ಣಪ್ಪರವರ ಮನೆ ಪಕ್ಕ, 2 ನೇ ಕ್ರಾಸ್, ಇಂದಿರಾನಗರ, ತರೀಕೆರೆ.
4. ನಿಂಗಾನಾಯ್ಕ ಬಿನ್ ಸೋಮ್ಲಾನಾಯ್ಕ, 55 ವರ್ಷ, ಕೂಲಿ ಕೆಲಸ, ವಾಸಃನಾಗೇನಹಳ್ಳಿ ತಾಂಡ್ಯ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು.
5. ಮಾಣಿಕ್ಯ (ಮೃತಪಟ್ಟಿರುತ್ತಾರೆ)
6. ಪ್ರವೀಣ, ವಾಸಃ ಕರಕುಚ್ಚಿ ತಾಂಡ್ಯ, ತರೀಕೆರೆ ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

2016 ನೇ ನವೆಂಬರ್ ತಿಂಗಳಲ್ಲಿ ಒಂದು ದಿನ ರಾತ್ರಿ ವೇಳೆಯಲ್ಲಿ 4 ನೇ ಆರೋಪಿ, ಮೃತಪಟ್ಟ 5 ನೇ ಆರೋಪಿ ಹಾಗೂ 6 ನೇ ಆರೋಪಿತರಾದ ನೀವು ತರೀಕೆರೆ ತಾಲ್ಲೂಕು ಎಂ ಸಿ ಹಳ್ಳಿ ಗ್ರಾಮದ ನೀಲಗಿರಿ ಪ್ಲಾಂಟೇಷನ್ನಿನಲ್ಲಿ 4 ನೇ ಆರೋಪಿಯಾದ ನಿಮ್ಮ ಬಳಿ ಇದ್ದ ಒಂಟಿ ನಳಿಕೆಯ ಒಂದು ಅಕ್ರಮ ನಾಡ ಬಂದೂಕನ್ನು ತೆಗೆದುಕೊಂಡು ಹೋಗಿ, ಪ್ಲಾಂಟೇಷನ್ನಿನಲ್ಲಿದ್ದ ಒಂದು ಮರಿ ಚಿರತೆಯನ್ನು ಗುಂಡು ಹಾರಿಸಿ ಸಾಯಿಸಿ, 4 ನೇ ಆರೋಪಿ, ಮೃತಪಟ್ಟ 5 ನೇ ಆರೋಪಿ ಹಾಗೂ 6 ನೇ ಆರೋಪಿತರಾದ ನೀವುಗಳು

ಸೇರಿ ಸದರಿ ಮರಿ ಚಿರತೆಯ ಚರ್ಮವನ್ನು ಸುಲಿದು ಒಣಗಿಸಿ, ಯಾರಾದರೂ ಗಿರಾಕಿ ಬಂದರೆ ಸದರಿ ಚರ್ಮವನ್ನು ಮಾರಾಟ ಮಾಡಲು 1 ರಿಂದ 3 ನೇ ಆರೋಪಿತರಾದ ನಿಮಗೆ ಕೊಟ್ಟಿದ್ದು, ಸದರಿಯವರು ದಿನಾಂಕ:05.01.2017 ರಂದು ಬೆಳಿಗ್ಗೆ 7-00 ಗಂಟೆಗೆ ತರೀಕೆರೆ ಪಟ್ಟಣದ ಹೊರವಲಯದ ತುದಿಪೇಟೆ ಮಾಚೇನಹಳ್ಳಿ, ಹತ್ತಿರ ದುಗ್ಲಾಪುರ ರಸ್ತೆಯಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಮೋಟಾರ್ ಸೈಕಲ್ ನಂ.ಕೆಎ-18-ಡಬ್ಲ್ಯೂ-6875 ರಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಚಿರತೆಯ ಚರ್ಮವನ್ನು ಕಳ್ಳತನದಿಂದ ಮಾರಾಟ ಮಾಡಿದ್ದು, ಆ ಮೂಲಕ ನೀವು ಕಲಂ. **9, 39, 40, 49(ಬಿ), 50, 51** ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಕಲಂ.**379** ಮತ್ತು ಕಲಂ.**25** ಭಾರತೀಯ ಆಯುಧ ಕಾಯಿದೆ ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ:

Sd/-
**(ನಂಜೇಗೌಡ ಎಂ.ಸಿ.)**
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉ:

ಎ-1

ಎ-2

ಎ-3

ಎ-4

ಎ-6

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉ:

ಎ-1
ಎ-2

ಎ-3

ಎ-4

ಎ-6

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)
ದಿನಾಂಕಃ

*Sd/-*
ಹಿ. ಪ್ರಧಾನ ಪ್ರ.ದ.ನ್ಯಾದಂ ತರೀಕೆರೆ.

ಆರೋಪಿತರ ಸಹಿಃ